THIRD LIST OF THIRD SESSION, 1973

UNSTARRED QUESTIONS AND ANSWERS

ENCROACHMENT ON P.W.D. SITE AT CHITRAPALLI VILLAG, HADAGALI TALUK

40. (4) SRI SATYANARAYANA SINGH (Hospet).— Will the Minister for Community Development and Social Welfare be pleased to state:—

(*a*) whether it has come to the notice of the Government that unauthorised encroachment on P W D site is going on in Chintrapalli Village, Hadagali Taluk, Bellary by (1) Manmull (2) Venkatappa Setty;

(*b*) whether Government is aware that this was brought to the notice of the Deputy Commissioner, Bellary, Executive Engineer, Bellary, Assistant Engineer, Hadagali, by the concerned legislators;

(*c*) the reasons for not taking action either to stop this encroachment or to demolish the buildings constructed?

SRI M. MALLIKARJUNASWAMY (Minister for Community Development and Social Welfare).

(*a*) Yes.

(*b*) Yes.

(*c*) Action is being taken to evict the occupants.

ಮೊಸಳೆ ಗ್ರಾಮದ ದೊಡ್ಡ ಕೆರೆ

೪೧ (೬) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಹಾಸನ ಕ್ಷೇತ್ರದ ಮೊಸಳೆ ಗ್ರಾಮದ ದೊಡ್ಡಕೆರೆಯು ಏರಿಯಾದಲ್ಲ ಅನೇಕ ಕಡೆ ಮಳೆ ಬಿದ್ದು ಕೆರೆ ತುಂಬಿದರೂ ಸಹ ತುಂಬಿದ ಒಂದು ತಿಂಗಳಲ್ಲಿಯೇ

(ಶ್ರೀ ಕೆ. ಹೆಚ್. ಹನುಮೇಗೌಡ)

ಕೆರೆಯ ನೀರು ಖಾಲಿಯಾಗಿ ಬೆಳೆಗಳಿಗೆ ನೀರೊದಗದೆ ರೈತರು ಕಳೆದ ೮-೧೦ ವರ್ಷಗಳಿಂದ ತೊಂದರೆಗೀಡಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಸುಮಾರು ೪೫೦ ಎಕರೆ ಅಚ್ಚುಕಟ್ಟು ಹೊಂದಿರುವ ಈ ಕೆರೆಯು ತಕ್ಷಣ ರಿಪೇರಿಯಾಗದಿದ್ದರೆ ಕೆರೆಯು ಒಡೆದು ಹೋಗುವ ಸಂಭವವಿರುವುದಿಲ್ಲವೆ ;

(ಇ) ಈ ಕೆರೆಯ ದುರಸ್ತಿಗಾಗಿ ಅಂದಾಜು ಯಾವಾಗ ತಯಾರಾಯಿತು ;

(ಈ) ಅಂದಾಜು ಮೊಬಲಗೆಷ್ಟು ;

(ಉ) ಈ ಕೆರೆಯು ದುರಸ್ತಿಯು ತುರ್ತಾಗಿ ಆಗದಿರಲು ಕಾರಣಗಳೇನು?

ಶ್ರೀ ಎಚ್.ಎಂ. ಚೆನ್ನಬಸಪ್ಪ :....(ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).

ಉತ್ತರ.—(ಅ) ಹೌದು.

(ಆ) ಕೆರೆಯು ಒಡೆದು ಹೋಗುವ ಸಂಭವ ಇಲ್ಲ.

(ಇ) ೧೯೭೧-೭೨ರಲ್ಲಿ ಅಂದಾಜು ತಯಾರಾದುದು.

(ಈ) ೧,೭೯,೦೦೦ ರೂ.

(ಉ) ಅಂದಾಜು ಮಂಜೂರಾಗದೆ ಇರುವುದರಿಂದ ಕೆಲಸ ಕೈಗೆದು ಕೊಂಡಿರುವುದಿಲ್ಲ.

ಹಾಸನ ತಾಲ್ಲೂಕಿನಲ್ಲಿಯ ಕೆರೆಗಳ ಜೀರ್ಣೋದ್ಧಾರ

೪೨. (೯).—ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—

ಸಮಾಜ ಕಲ್ಯಾಣ ಮತ್ತು ಸಮಾಜ ವಿಕಾಸ ಮಂತ್ರಿಗಳು ಈ ವಿಷಯಗಳನ್ನು ಉತ್ತರಿಸುವರೆ ?

(ಅ) ಹಾಸನ ತಾಲ್ಲೂಕಿನಲ್ಲಿ ಹತ್ತು ಎಕರೆಗಳಿಗಿಂತ ಕಡಿಮೆ ಅಚ್ಚು ಕಟ್ಟಿರುವ ಎಷ್ಟು ಕೆರೆಗಳಿವೆ ;

(ಆ) ಇದುವರೆಗೆ ಎಷ್ಟು ಕೆರೆಗಳ ಜೀರ್ಣೋದ್ಧಾರವಾಗಿದೆ ಮತ್ತು ಎಷ್ಟು ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದೆ ;

(ಇ) ಈ ತಾಲ್ಲೂಕಿನಲ್ಲಿ ವರ್ಷ ಒಂದಕ್ಕೆ ಎಷ್ಟು ಕೆರೆಗಳ ದುರಸ್ತಿಗೆ ಹಣ ಸರ್ಕಾರ ಒದಗಿಸುತ್ತದೆ ;

(ಈ) ಇನ್ನೆಷ್ಟು ವರ್ಷಗಳಲ್ಲಿ ಎಲ್ಲಾ ಕೆರೆಗಳನ್ನು ದುರಸ್ತು ಮಾಡಿಸಲು ಸರ್ಕಾರ ಅಲೋಚಿಸಿದೆ ;

(ಉ) ಕಳೆದ ೬-೭ ವರ್ಷಗಳಿಂದ ಪದೇ ಪದೇ ಕ್ಷಾಮಕ್ಕೆ ಒಳಗಾಗುತ್ತಿರುವ ಈ ಪ್ರದೇಶಗಳಲ್ಲಿ ಈ ಕೆರೆಗಳನ್ನು ದುರಸ್ತು ಮಾಡಿಸಿ ಶಾಶ್ವತವಾದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ವಿಚಾರಿಸಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಸಹಾಯ ಕಲ್ಯಾಣ ಮತ್ತು ಸಮಾಜ ವಿಕಾಸ ಮಂತ್ರಿಗಳು).—

ಉತ್ತರ.—(ಅ) ೫೩೩ ಕೆರೆಗಳು.

(ಆ) ೩೦೦ ಕೆರೆಗಳು ; ಸುಮಾರು ೧,೮೦೦ ಎಕರೆಗೆ ನೀರಾವರಿಗೆ ಒಳಪಟ್ಟಿರುತ್ತೆ.

(ಇ) ಸುಮಾರು ೨೫ ಕೆರೆಗಳಿಗೆ ಸರಾಸರಿ ವರ್ಷ ಒಂದಕ್ಕೆ ೬೦,೦೦೦ ರೂ ತಾಲ್ಲೂಕು ಬೋರ್ಡಿಗೆ ಒದಗಿಸಿರುತ್ತೆ. ೧೯೭೨-೭೩ನೇ ಸಾಲಿಗೆ ರೂ. ೧,೧೪,೦೦೦ ಗಳನ್ನು ಒದಗಿಸಲಾಗಿದೆ.

(ಈ) ತಾಲ್ಲೂಕು ಬೋರ್ಡಿನಲ್ಲಿ ಈ ರೀತಿ ನಿಗದಿ ಮಾಡಿರುವುದಿಲ್ಲ.

(ಉ) ತಾಲ್ಲೂಕು ಬೋರ್ಡಿನಲ್ಲಿ ಹಣದ ಕೊರತೆಯಿದ್ದ ಕಾರಣ ಕ್ಷಾಮ ನಿವಾರಣಕ್ಕಾಗಿ ಶಾಶ್ವತವಾದ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ.

FUNDS TO T. D. B., HIREKERUR

43. (41) SRI B. G. BANAKAR (HIREKERUR).—Will the Minister for Community Development and Social Welfare be pleased to state :—

(*a*) the types of grants and total amount given by the Government to Hirekerur T.D.B. in Dharwar District during the last 3 years ;